KABR420007512014

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ</u>**

**:ಉಪಸ್ಥಿತರು:**

**ಶ್ರೀಮತಿ ಪ್ರೀತಿ.ಕೆ., ಎಲ್.ಎಲ್.ಎಂ.,**

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ದೊಡ್ಡಬಳ್ಳಾಪುರ

**<u>ದಿನಾಂಕ 28 ನೇ ಏಪ್ರಿಲ್, 2026</u>**

**<u>ಸಿ.ಸಿ. ಸಂಖ್ಯೆ:187/2014</u>**

**ಫಿರ್ಯಾದಿ :** **ದೊಡ್ಡಬೆಳವಂಗಲ ಪೊಲೀಸ್ ಠಾಣೆ**

**(ಸಹಾಯಕ ಸರ್ಕಾರಿ ಅಭಿಯೋಜಕರು)**

**// ವಿರುದ್ಧ //**

**ಆರೋಪಿತರು:** 1. ಶ್ರೀ, ಗಂಗಯ್ಯ
ವಯಸ್ಸು 45 ವರ್ಷಗಳು

2. ವೆಂಕಟಲಕ್ಷ್ಮಮ್ಮ
ವಯಸ್ಸು 40 ವರ್ಷಗಳು
ವಯಸ್ಸು 55 ವರ್ಷಗಳು

**ಎಲ್ಲರ ವಾಸಃ**
ಶಿರಸ್ತೆದಾರಪಾಳ್ಯ
ಸಾಸಲು ಹೋಬಳಿ
ದೊಡ್ಡಬಳ್ಳಾಪುರ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ.
**(ಶ್ರೀ .ಎ. ವಿ,, ವಕೀಲರು)**

**<u>:ತೀರ್ಪು:</u>**

ದೊಡ್ಡಬೆಳವಂಗಲ ಪೋಲೀಸ್ ಠಾಣಾ ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ: 323, 324, 504 ಸಹಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**<u>2. ಅಭಿಯೋಜನೆ ಪ್ರಕರಣದ ಸಾರಾಂಶ ಈ ಕೆಳಗಿನಂತೆ ಇರುತ್ತದೆ.</u>**

ದಿನಾಂಕ:10.01.2014 ರಂದು ರಾತ್ರಿ 7-30 ರ ಸಮಯದಲ್ಲಿ ದೊಡ್ಡಬೆಳವಂಗಲ ಪೋಲೀಸ್ ಠಾಣಾ ಸರಹದ್ದು, ಶಿರಸ್ತೆದಾರನಪಾಳ್ಯ ಗ್ರಾಮದಲ್ಲಿ ಚಾಸಾ-1 ರವರ ಮಗಳು ತಮ್ಮ ಮನೆಯ ಮುಂದೆ ಆಟವಾಡುತ್ತಿದ್ದಾಗ, 1 ನೇ ಆರೋಪಿಯು ಮಗುವಿನ ಕಾಲುನ್ನು ತುಳಿದಿದ್ದು, ಆಗ ಮಗು ಅಳುತ್ತಿದ್ದಾಗ ಚಾಸಾ-1 ರವರು 1 ನೇ ಆರೋಪಿಯನ್ನು ಈ ಬಗ್ಗೆ ಪ್ರಶ್ನಿಸಿದಾಗ ಚಾಸಾ-1 ರವರಿಗೆ ಅವಾಚ್ಯಶಬ್ದಗಳಿಂದ ಬೈದು, ಸೌದೆಯಿಂದ ತಲೆಗೆ ಹೊಡೆದು ನೋವುಂಟು ಮಾಡಿ, 2 ನೇ ಆರೋಪಿಯು ಚಾಸಾ-1 ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ನಂತರ ಆರೋಪಿತರಿಬ್ಬರು ಸೇರಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆ ಮೂಲಕ ಆರೋಪಿತರ ವಿರುದ್ಧ ಮೇಲ್ಕಂಡ ಶಿಕ್ಷಾರ್ಹ ಅಪರಾಧ ಮಾಡಿರುವುದಾಗಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ.

3. ಈ ಪ್ರಕರಣದಲ್ಲಿ ಪೋಲಿಸರು ಪ್ರಥಮ ವರ್ತಮಾನ ಹೇಳಿಕೆ (ದೂರನ್ನು) ಸ್ವೀಕರಿಸಿ ಠಾಣಾ ಮೊಕದ್ದಮೆ 05/2014 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ತನಿಖೆಯ ನಂತರ ಆರೋಪಿತರ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.

4. ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯ ಆಪಾದಿಸಿದ ಅಪರಾಧಗಳಿಗೆ ಸಂಜ್ಞೇಯ ತೆಗೆದುಕೊಂಡು, ಆರೋಪಿತರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿ ಸಮನ್ಸ್ ಹೊರಡಿಸಿರುತ್ತದೆ. ಆರೋಪಿತರು ಸಮನ್ಸ್ ಸ್ವೀಕಾರ ಮಾಡಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

5. ದಂ.ಪ್ರ.ಸಂ.ಕಲಂ 207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸಿ ತಿಳಿಯುವಂತೆ ಓದಿ ಹೇಳಿದಾಗ ಆರೋಪಿತರು ತಾವು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕೆಂದು ಕೇಳಿಕೊಂಡಿರುತ್ತಾರೆ.

6. ಅಭಿಯೋಜನೆ ಪರ ಒಬ್ಬ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ ನಿಪಿ-1 ಮತ್ತು ನಿಪಿ-2 ದಾಖಲೆಗಳನ್ನು ಗುರುತಿಸಿಕೊಳ್ಳಲಾಗಿರುತ್ತದೆ. ಚಾಸಾ-1 ರವರನ್ನು ಪ್ರಾಸಾ-1 ಆಗಿ ಅಭಿಯೋಜನೆ ಸಾಕ್ಷಿಗೆ ಗುರಿಸಿಪಡಿಸಿರುತ್ತದೆ. ಚಾಸಾ-1 ಈ ಪ್ರಕರಣದಲ್ಲಿನ ಪಿರ್ಯಾದಿ ಹಾಗೂ ನೊಂದ ವ್ಯಕ್ತಿಯಾಗಿದ್ದು, ಅಭಿಯೋಜನೆಗೆ ಪೂರಕ ಸಾಕ್ಷ್ಯ ನುಡಿಯದ ಕಾರಣ, ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಸಮನ್ಸ್

ನೀಡಲು ಕೋರಿಕೊಂಡ ಕೋರಿಕೆಯನ್ನು ಈ ನ್ಯಾಯಾಲಯ ತಿರಸ್ಕರಿಸಿರುತ್ತದೆ. ಕಾರಣ ಪ್ರಮುಖ ಸಾಕ್ಷಿ ಅಭಿಯೋಜನೆಗೆ ಬೆಂಬಲ ಸೂಚಿಸದ ಸಂದರ್ಭದಲ್ಲಿ ಉಳಿದ ಸಾಕ್ಷಿಗಳ ಸಾಕ್ಷ್ಯವು ಅಭಿಯೊಜನೆಗೆ ಸಹಾಯಕವಾಗುವುದಿಲ್ಲ. ಆರೋಪಿತರ ವಿರುದ್ಧ ಆರೋಪಗಳಿಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳು ಲಭ್ಯವಿರದ ಕಾರಣ ದಂ.ಪ್ರ.ಸಂ.ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಕೈ ಬಿಡಲಾಗಿರುತ್ತದೆ. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷಿಯನ್ನು ವಿಚಾರಣೆಗೆ ಒಳಪಡಿಸಿಕೊಂಡಿಲ್ಲ ಮತ್ತು ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

7. ಅಭಿಯೋಜನೆ ಪರ ಹಾಗೂ ಆರೋಪಿತರ ಪರ ವಕೀಲರ ವಾದ ಕೇಳಲಾಯಿತು ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು.

**8. ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.**

ಅಂಶ-1:-ದಿನಾಂಕ: 10.01.2014 ರಂದು ರಾತ್ರಿ 4-30 ರ ಸಮಯದಲ್ಲಿ ದೊಡ್ಡಬೆಳವಂಗಲ ಪೋಲೀಸ್ ಠಾಣಾ ಸರಹದ್ದು, ಶಿರಸ್ತೆದಾರನಪಾಳ್ಯ ಗ್ರಾಮದಲ್ಲಿ ಚಾಸಾ-1 ರವರ ಮಗಳು ತಮ್ಮ ಮನೆಯ ಮುಂದೆ ಆಟವಾಡುತ್ತಿದ್ದಾಗ, 1 ನೇ ಆರೋಪಿಯು ಮಗುವಿನ ಕಾಲುನ್ನು ತುಳಿದಿದ್ದು, ಆಗ ಮಗು ಅಳುತ್ತಿದ್ದಾಗ ಚಾಸಾ-1 ರವರು 1 ನೇ ಆರೋಪಿಯನ್ನು ಈ ಬಗ್ಗೆ ಪ್ರಶ್ನಿಸಿದಾಗ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಸೌದೆಯಿಂದ ತಲೆಗೆ ಹೊಡೆದು ನೋವುಂಟು ಮಾಡಿ, 2 ನೇ ಆರೋಪಿಯು ಚಾಸಾ-1 ರವರಿಗೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ನಂತರ ಆರೋಪಿತರಿಬ್ಬರು ಸೇರಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, ಆ ಮೂಲಕ ಭಾ.ದಂ.ಸಂ.ಕಲಂ 323, 324, 504 ಸಹಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂಬುದನ್ನು ಅಭಿಯೋಜನೆ ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತದೆಯೇ?

***ಅಂಶ-2*** *ಏನು ಆದೇಶ ?*

9. **ಈ ಮೇಲ್ಕಂಡ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸಲಾಗಿದೆ.**

***ಅಂಶ :1 : ನಕಾರಾತ್ಮಕವಾಗಿ***

***ಅಂಶ :2 ಅಂತಿಮ ಆದೇಶದಂತೆ ಃ***

**:ಕಾರಣಗಳು:**

10.**ಅಂಶಃ-1**ಃಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ರುಜುವಾತು ಪಡಿಸಲು ಅಭಿಯೋಜನೆಯು ಪ್ರಾಸಾ-1 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ನಿಪಿಃ1 ಮತ್ತು ನಿಪಿಃ2 ದಾಖಲೆಗಳನ್ನು ಗುರುತಿಸಿಕೊಂಡಿರುತ್ತದೆ. ನಿಪಿ:1: ದೂರು, ನಿಪಿ:2: ಪಂಚನಾಮೆ ಯಾಗಿರುತ್ತದೆ.

11. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ-1 ಈ ಪ್ರಕರಣದ ಪಿರ್ಯಾದಿ ಹಾಗೂ ನೊಂದ ವ್ಯಕ್ತಿಯಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ದೂರನ್ನು ನಿಪಿ-1 ಮತ್ತು ಪಂಚನಾಮೆಯನ್ನು ನಿಪಿ-2 ಎಂದು ಗುರುತಿಸಿ, ಆರೋಪಿತರು ಮತ್ತು ತಮ್ಮ ನಡುವೆ ಕೌಟುಂಬಿಕ ವಿಚಾರಕ್ಕಾಗಿ ಮಾತಿನ ಚಕಮಕಿಯಾಗಿದ್ದು, ಆಗ ತಾನು ಸಿಟ್ಟಾಗಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನಿಪಿ-1 ಮತ್ತು 2 ಕ್ಕೆ ತನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ-1 ಮತ್ತು 2 ರಲ್ಲಿನ ವಿಚಾರ ಗೊತ್ತಿಲ್ಲ, ಆರೋಪಿತರು ತನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಯಾವುದೇ ವಸ್ತುವಿನಿಂದ ಹಾಗೂ ಕೈಗಳಿಂದ ಹೊಡೆದು ನೋವುಂಟು ಮಾಡಿಲ್ಲ, ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ನ್ಯಾಯಾಲಯದ ಅನುಮತಿ ಪಡೆದು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಿ ನೀಡಿದಂತಹ ಎಲ್ಲ ಸಲಹೆಗಳನ್ನು ಸಾಕ್ಷಿ ನಿರಾಕರಿಸಿ ಅಲ್ಲಗಳೆದಿರುತ್ತಾರೆ ಮತ್ತು ರಾಜೀ ಆಗಿರುವುದಾಗಿ ನುಡಿದಿರುತ್ತಾರೆ.

12. ಮುಂದುವರೆದು, ಈ ಪ್ರಕರಣವನ್ನು ಆರೋಪಿತರು ಭಾ.ದಂ.ಸಂ. ಕಲಂಃ 323, 324, 504 ಸಹಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ದಾಖಲಿಸಿದ್ದು, ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪವನ್ನು ಸ್ಥಾಪಿಸಲು ಪ್ರಾಸಾ-1 ರವರನ್ನು ವಿಚಾರಣೆಗೆ ಒಳಪಡಿಸಿರುತ್ತದೆ. ಪ್ರಾ.ಸಾ-1 ರವರು ಈ ಪ್ರಕರಣದ ಪಿರ್ಯಾದಿ ಮತ್ತು ನೊಂದವರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ ಹಾಗೂ ನಿಪಿಃ1 ರಲ್ಲಿನ ಯಾವ ಅಂಶವನ್ನು ಪ್ರಾಸಾ-1 ರವರು ನುಡಿದಿರುವುದಿಲ್ಲ ಬದಲಿಗೆ ಪ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ತನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಯಾವುದೇ ವಸ್ತುವಿನಿಂದ ಹಾಗೂ ಕೈಗಳಿಂದ ಹೊಡೆದು ನೋವುಂಟು ಮಾಡಿಲ್ಲ ಎಂದು ನುಡಿದಿರುತ್ತಾರೆ. ಈ

ಪ್ರಕರಣದ ಪ್ರಮುಖ ಸಾಕ್ಷಿಯ ಪ್ರತಿಕೂಲತೆ ಅಭಿಯೋಜನೆಗೆ ಆರೋಪಿತರ ಮೇಲೆ ಮಾಡಲಾಗಿರುವ ಆರೋಪಗಳನ್ನು ರುಜುವಾತುಪಡಿಸಲು ಸಾಧ್ಯವಾಗಿರುವುದಿಲ್ಲ. ಆರೋಪಿತರ ವಿರುದ್ಧ ಆಪಾದಿಸಿರುವ ಆರೋಪಗಳನ್ನು ಸಾಬೀತು ಪಡಿಸಲು ಯಾವುದೇ ಬಲವಾದ ಸಾಕ್ಷ್ಯ ಈ ನ್ಯಾಯಾಲಯದ ಮುಂದೆ ಇರುವುದಿಲ್ಲ. **ಆದ್ದರಿಂದ ಅಂಶ-1 ನ್ನು ನಕಾರಾತ್ಮಕ ಎಂದು ಉತ್ತರಿಸಲಾಗಿದೆ.**

**13. ಅಂಶ-2:** ಮೇಲೆ ಚರ್ಚಿಸಿರುವ ಅಂಶಗಳಿಗಾಗಿ ಈ ಕೆಳಗಿನಂತೆ,

**ಆದೇಶ**

ದಂ.ಪ್ರ.ಸಂ.ಕಲಂ 248(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿತರ ವಿರುದ್ಧ ಮಾಡಲಾದ ಭಾ.ದಂ.ಸಂ.ಕಲಂ 323, 324, 504 ಸಹಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ನಿರ್ದೋಶಿಗಳು ಎಂದು ಖುಲಾಸೆಗೊಳಿಸಲಾಗಿದೆ.

ಆರೋಪಿತರ ಹಾಗೂ ಅವರುಗಳ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳನ್ನು ಅಪೀಲು ಅವಧಿಯ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

ಮಾಲು ಪಟ್ಟಿ ಸಂಖ್ಯೆ-03/2014 ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ಸೌದೆ ಪಾಳಿ ಬೆಲೆ ರಹಿತ ವಸ್ತುವಾಗಿರುವುದರಿಂದ ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಉಕ್ತಲೇಖನವನ್ನು ಗಣಕಯಂತ್ರದ ಮೂಲಕ ನೇರವಾಗಿ ಶೀಘ್ರಲಿಪಿಗಾರರಿಗೆ ನೀಡಿ, ಅವರು ಬೆರಳಚ್ಚು ಮಾಡಿದ ನಂತರ, ತಪ್ಪುಗಳನ್ನು ತಿದ್ದಿ, ಸರಿಪಡಿಸಿ ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ದಿಃ 28 ನೇ ಏಪ್ರಿಲ್ 2026 ರಂದು ಘೋಷಿಸಲಾಗಿದೆ)

**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ.,
ದೊಡ್ಡಬಳ್ಳಾಪುರ

**:ಅನುಬಂಧ:**

**1. ಅಭಿಯೋಜನೆ ಪರ ಸಾಕ್ಷಿಗಳ ಪಟ್ಟಿಃ**

ಪ್ರಾಸಾ :1 : ಶ್ರೀನಿವಾಸ್

**2. ಅಭಿಯೋಜನೆ ಪರ ದಾಖಲೆಗಳ ಪಟ್ಟಿಃ**

ನಿಪಿ :1 :ಖಾಸಗಿ ದೂರು

ನಿಪಿ :2 :ಸ್ಥಳ ಪಂಚನಾಮೆ

**2. ಅಭಿಯೋಜನೆ ಪರ ಮುದ್ದೆ ಮಾಲುಗಳ ಪಟ್ಟಿ:**

ಇಲ್ಲ

**3. ಆರೋಪಿಗಳ ಪರ ಸಾಕ್ಷಿ ಗಳ ಪಟ್ಟಿ:**

-ಇಲ್ಲಾ -

**4. ಆರೋಪಿಗಳ ಪರ ದಾಖಲೆಗಳ ಪಟ್ಟಿ:**

-ಇಲ್ಲಾ -

**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ.,
ದೊಡ್ಡಬಳ್ಳಾಪುರ